# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ08.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಲಿಂಗಪ್ರಸಾದ್ .ಎಸ್.ಬಿನ್ ಶಿವಣ್ಣ |
| ವರ್ಷ | 44 ವರ್ಷ |
| ಕೆಲಸ | ವ್ಯವಸಾಯ |
| ವಾಸ್ತವ್ಯ | ಹಾರನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಹೆಚ್.ಎಂ.ಜಿ. ರವರಿಂದ

ಒಡನಘಟ್ಟ ಗ್ರಾಮದ ಸ.ನಂಃ14 ರ ಒಟ್ಟು ವಿಸ್ತೀರ್ಣ 6 ಎಕರೆ 30 ಗುಂಟೆ ಎಂದರೆ ಸರಿ. ಸದರಿ 6 ಎಕರೆ 30 ಗುಂಟೆ ಪೈಕಿ 38 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ಹೇಮಾವತಿ ನಾಲೆಗೆಂದು ಭೂಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ಸರಿ . ಸ.ನಂಃ14 ರ 6 ಎಕರೆ 30 ಗುಂಟೆ ಜಮೀನಿನಲ್ಲಿ ಪೂರ್ವ–ಪಶ್ಚಿಮವಾಗಿ ಹೇಮಾವತಿ ನಾಲೆ ಇರುತ್ತದೆ ಎಂದರೆ ಸರಿ. ಸ.ನಂಃ14 ರ ಎಲ್ಲಾ ಹಿಸ್ಸಾ ಜಮೀನುಗಳಲ್ಲಿ ಹೇಮಾವತಿ ನಾಲೆ ಹೋಗಿರುತ್ತದೆ ಎಂದರೆ ಸರಿ. ಸ,.ನಂಃ14 ರಲ್ಲಿ 1 ನೇ ಪ್ರತಿವಾದಿಗೆ 2 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಆ 2 ಎಕರೆ 10 ಗುಂಟೆ ಜಮೀನು 2 ಭಾಗಗಳಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.ಮೊದಲನೇ ಭಾಗ 1 ಎಕರೆ 20 ಗುಂಟೆ ಜಮೀನು ಸ. ನಂಃ 14 ರ ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಭಾಗ 30 ಗುಂಟೆ ಜಮೀನು ಸ.ನಂಃ14 ರ ಪೂರ್ವ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 2 ಎಕರೆ 10 ಗುಂಟೆ ಜಮೀನು ಸ.ನಂಃ14 ರ ಪಶ್ಚಿಮ ದಿಕ್ಕಿನಲ್ಲಿ ಇದೆ . ಸಾಕ್ಷಿ ಮುಂದುವರಿದು ಪಶ್ಚಿಮ ದಿಕ್ಕಿನಲ್ಲಿ 30 ಗುಂಟೆ ಇರುತ್ತದೆ , ಇನ್ನುಳಿದ 1 ಎಕರೆ 20 ಗುಂಟೆ ಜಮೀನು ಸ.ನಂಃ14 ರ ಉತ್ತರ ದಿಕ್ಕಿನಲ್ಲಿ ಇರುತ್ತದೆ ಎನ್ನುತ್ತಾರೆ.

2. 1 ನೇ ಪ್ರತಿವಾದಿ ಸ.ನಂಃ 14 ರಲ್ಲಿ 2 ಎಕರೆ 10 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸ.ನಂಃ 14 ರ ಪಶ್ಚಿಮ ಭಾಗದಲ್ಲಿದ್ದ 1 ಎಕರೆ 20 ಗುಂಟೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು ನನ್ನ ತಂದೆಗೆ ಮಾರಾಟ ಮಾಡಿದರು ಎಂದರೆ ಸರಿ. ಹಾಗಾಗಿ ಪಶ್ಚಿಮ ದಿಕ್ಕಿನಲ್ಲಿ ಇನ್ನು 1 ಎಕರೆ ಜಮೀನು ಮಾತ್ರ 1 ನೇ ಪ್ರತಿವಾದಿಗೆ ಉಳಿದುಕೊಂಡಿತು ಎಂದರೆ ನನಗೆ ಗೊತ್ತಿಲ್ಲ. ಸ.ನಂಃ14 ರ ಪೂರ್ವ ದಿಕ್ಕಿನಲ್ಲಿರುವ 1 ನೇ ಪ್ರತಿವಾದಿಯ 30 ಗುಂಟೆ ಜಮೀನು ಹಾಗೇ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮಾರಾಟ ಮಾಡಿದ 20 ಗುಂಟೆ ಜಮೀನು ಸ.ನಂಃ14/2 ಎಂದು ಪೋಡಾಯಿತು ಎಂದರೆ ಸರಿ. ನಮ್ಮ ಸದರಿ ಸ.ನಂಃ 14/2 ,20 ಗುಂಟೆ ಜಮೀನಿನಲ್ಲೂ ಸಹ ಹೇಮಾವತಿ ನಾಲೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸ.ನಂಃ14 ರ ಮಧ್ಯಾಭಾಗದಲ್ಲಿ ಹೇಮಾವತಿ ನಾಲೆ ಹೋಗಿರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಉತ್ತರಕ್ಕೆ – ಹೇಮಾವತಿ ಚಾನಲ್ ಇದೆ.

**(ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.)**

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.